# ಮೋಹನಾಸ್ತ್ರಪೀಡಿತಳಾದ ಪ್ರೇಮಕಾತರ ಚಿತ್ರಾಂಗದೆ

## ಶಾರದಾ ದೇವಿಯ ಪ್ರಾರ್ಥನೆ

ಶಾರದೆಯೆ, ನೀನು ಬ್ರಹ್ಮನ ಮಹತ್‌ಗರ್ಭದಿಂದ ಜನಿಸಿದ ವಿರಾಟ್‌ಸೃಷ್ಟಿಯ, ಭವ್ಯಾನಂದ ಸಿರಿಯ, ಬೇಡಿದುದನ್ನು ಅನುಗ್ರಹಿಸುವ ಮಾತೆ. ನವಿಲು ವಾಹನೆಯಾದ ನುಡಿಯ ಅಧಿದೇವತೆ ಸರಸ್ವತಿಯೆ, ಭಾವಚಿಂತಾಗಣಿಯೆ, ಭುವನವನ್ನು ಮೋಹಿಸುವ ಮಧುರ ವೀಣೆಯನ್ನು ಕೈಯಲ್ಲಿ ಹಿಡಿದಿರುವ ವಾಗ್ದೇವಿಯೆ, ನೀನು ಸರಸ ಕವಿತಾ ಕಲ್ಯಾಣಿ. ಓ ತಾಯಿ ನಿನ್ನ ಪವಿತ್ರ ಪಾದಕಮಲಗಳಿಗೆ ನನ್ನ ತಲೆಯಿಟ್ಟು ನಮಿಸುತ್ತ ಮುಂಗುರುಳ ದುಂಬಿಗಳನ್ನು ತುಂಬುತ್ತೇನೆ. ಕೃಪೆದೋರಿ ಈ ಕಂದನನ್ನು ಕರುಣೆಯಿಂದ ಕಂಡು, ಜಡಮತಿಗೆ ದಿವ್ಯ ವಿದ್ಯುತ್ ಚೇತನವನ್ನು ನೀಡಿ, ನನ್ನ ನಾಲಗೆಯಲ್ಲಿ ನಲಿದು ಒಲಿದು ನರ್ತನವನ್ನು ಮಾಡು.

ಹೇ ಕಾವ್ಯ ಕಾಮಿನಿಯೆ, ನಿನ್ನಿಂದಲೆ ಭುವನ ಸ್ವರ ಮೇಳೈಸಿ ನಿಯಮ ಸಂಯಮ ಪೂರ್ಣ ಮಾಧುರ್ಯವು ಸ್ವಚ್ಛಂದ ಆನಂದಶೀಲವು ಉಕ್ಕುತ್ತಿದೆ! ಆ ಸ್ಫೂರ್ತಿಯನ್ನು ನಾನು ಹಾಡಲಿರುವ ಗಾನದಲ್ಲಿ ನನಗೆ ದಯಪಾಲಿಸು. ಅದು ಸ್ವಾತಂತ್ರ್ಯ, ಮಾಧುರ್ಯ, ಸಂಯಮಗಳಿಂದ ಹೊಮ್ಮಿ, ನನ್ನ ಕನ್ನಡನಾಡಿನ ಜನರ ಎದೆಯ ಹೂ ಅರಳುವಂತೆ ಆಶೀರ್ವಾದ ಮಾಡು.

ಓ ಕಲ್ಪನಾ ಸುಂದರಿಯೆ, ನಿನ್ನ ಮಹಿಮೆಯಿಂದ ವ್ಯಾಸ ಪ್ರಥಮ ಕವಿಯಾದನು. ತಾಯೆ, ಮಲಿನಗೊಂಡ ಕನ್ನಡಿಯು ಮಹಾ ಸೂರ್ಯನನ್ನು ಕನ್ನಡಿಸಿ (ಪ್ರತಿಫಲಿಸಿ) ಈ ಭೂಮಿಗೆ ಪ್ರಕಾಶವನ್ನು ನೀಡಲು ಪ್ರಯತ್ನಿಸಿ ಹಿಗ್ಗುತ್ತದೆ. ಹಾಗೆ ತಾಯೆ, ಹಸುಳೆಯಾದ ನನ್ನನ್ನು ಒಮ್ಮೆ ನೀನು ಚುಂಬಿಸಿದರೆ ಈ ನನ್ನ ತೊದಲುವ ತುಟಿ ಬೃಹತ್ ಕಾವ್ಯ ಸಂಗೀತವನ್ನು ಗಾನಗೈಯುವುದಿಲ್ಲವೆ ಹೇಳು?

ಶಿಶುವು ತಾನು ಆ ದೂರದಲ್ಲಿರುವ ನಕ್ಷತ್ರವನ್ನು ಹಿಡಿದು ತನ್ನ ಕೈದೀವಿಗೆಯಾಗಿಸಿಕೊಳ್ಳಲು ಅಪೇಕ್ಷಿಸುವುದು. ಉನ್ಮತ್ತ ಸಾಹಸಿಯು ದಿಗಂತವನ್ನು ಬೆನ್ನಟ್ಟಲು ತೊಡಗುವನು. ಹಾಗೆ ನಾನು ವಾಲ್ಮೀಕಿ, ವ್ಯಾಸ, ಪಂಪ, ರನ್ನರ ದಿವ್ಯ ಕೀರ್ತಿ ಕಾಮಿನಿಯ ಪಾದಗಳ ಪವಿತ್ರ ಧೂಳನ್ನು ನನ್ನ ತಲೆಯಲ್ಲಿ ಧರಿಸುವ ಪುಣ್ಯವನ್ನು ಬಯಸಿ ಹೇ ದೇವಿ, ನಿನ್ನನ್ನು ಎದೆತುಂಬಿ ಪ್ರಾರ್ಥಿಸುವೆನು. ತಾಯೆ ಕೃಪೆದೋರಿ ನಿನ್ನ ವೀಣಾವಾಣಿಯನ್ನು ನೀಡು.

## ಮೃಗಯಾ ವಿನೋದ ತರುಣಿ ಚಿತ್ರಾಂಗಿ

ಏಳು, ವೀಣೆಯೆ, ಏಳು! ಹೇ ಅಮೃತ ಭಾಷಿಣಿಯೆ, ಮುಂದಿನ ಕಥೆಯನ್ನು ಹೇಳು! ಸಂಧ್ಯಾ ನಭೋಂಗಣದಲ್ಲಿ ಪೂರ್ಣ ಕೆಂಪಾದ ಮುಗಿಲಿನ ಪರಿವಾರದಿಂದ ಆವರಿಸಿದ ದಿವಸಮಣಿ ಸೂರ್ಯನು ಪಶ್ಚಿಮಾಂಬುಧಿಗೆ ಇಳಿದನು. ಧರೆಯಲ್ಲಿ ಕತ್ತಲೆಯ ದಂಡು ಬೀಡುಬಿಟ್ಟಿತು. ರಾತ್ರಿಯ ವಸ್ತ್ರದ ಕಾಂತಿ ಕುಸುಮಗಳಾದ ತಾರೆಗಳು ಮೈದೋರಿದವು. ಪ್ರಾಣಿಗಳನ್ನು ಬೇಟೆಯಾಡುವ ವಿನೋದ (ಮೃಗಯಾ ವಿನೋದ)ದಿಂದ ತುಂಬಾ ಬಳಲಿದ ತರುಣಿ ಚಿತ್ರಾಂಗಿಯು ಬನದ ದೇಗುಲಕ್ಕೆ ಬಂದಳು. ಹತ್ತಿರದ ಕೊಳದಲ್ಲಿ ಮಿಂದಳು. ಹಣ್ಣು ಹಂಪಲುಗಳನ್ನು ತಿಂದಳು. ಆ ಕೋಮಲೆಯು ಶಿವಾಲಯದ ಕಲ್ಲು ನೆಲದ ಕಠಿಣ ಹಾಸಿನ ಮೇಲೆ ಮಲಗಿದಳು. ಹೇ ಅಮೃತ ಭಾಷಿಣಿಯೆ, ಮುಂದಿನ ಕಥೆಯನ್ನು ಹೇಳು! ಏಳು, ವೀಣೆಯೆ, ಏಳು!

## ಸ್ವಪ್ನ ಮಧುಮಾಯೆ

ನಿದ್ರಾಂಗನೆಯ ಪರಮಸಖಿ ಸ್ವಪ್ನಸುಂದರಿ, ಅವಳು ಇರುಳಿನ ನಕ್ಷತ್ರ ಖಚಿತ ಅರಿವೆಯನ್ನು ಉಟ್ಟು, ಸೊಂಟದಲ್ಲಿ ಮನ್ಮಥನ ಬಿಲ್ಲಿನ ಸೂತ್ರವನ್ನು ತೊಟ್ಟುಕೊಂಡು ಭೂಯಾತ್ರೆ ಮಾಡುತ್ತಿದ್ದಳು. (ಅವಳು ಮೋಹನ ವಸಂತದಲ್ಲಿ ಹೂವಿಂದ ಹೂವಿಗೆ ಪರಿಮಳವನ್ನು ಅರಸುತ್ತ ತುಂಬಿಯು ಗಾಳಿಯಲ್ಲಿ ಅಲೆಯುವಂತೆ ಸಾಗುತ್ತಿದ್ದಳು.) ಆಗ ಅವಳು ಬನದ ಗುಡಿಯಲ್ಲಿ ಕಲ್ಲಿನ ನೆಲದ ಮೇಲೆ ಈಶ್ವರಾರ್ಪಿತ ಕುಸುಮ ಸದೃಶವಾದ ಚಿತ್ರಾಂಗಿಯನ್ನು ಕಂಡಳು. ದೇವಿಯು ಮೆಚ್ಚಿ ನಿಂತಳು. ಸ್ವಪ್ನ ಸಾಮ್ರಾಜ್ಯದ ಆ ಚಕ್ರವರ್ತಿನಿಯು ಚಿತ್ರಾಂಗದಾ ರಮಣಿಯ ಮನಸ್ಸಿಗೆ ಸ್ವಪ್ನ ಮಧುಮಾಯೆಯನ್ನು ಬೀಸಿದಳು.

